# ಆರ್. ಎಸ್. ಹೂಗಾರ ಸೇವಾರತ್ನ ಪ್ರಶಸ್ತಿ–೨೦೧೯

## ಪ್ರದಾನ ಸಮಾರಂಭ



ಧಾರವಾಡ : ಗ್ರಾಹಕರಿಗೆ ತೃಪ್ತಿಕರವಾದ ಸೇವೆ ಒದಗಿಸುವುದೇ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ನೈಜ ಕನಸು ಎಂದು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಚೇರಮನ್ ಎಸ್. ರವೀಂದ್ರನ್ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ ೩೧–೩–೨೦೧೯ ರಂದು ಬ್ಯಾಂಕಿಂಗ್ ಕ್ಷೇತ್ರದ ಭೀಷ್ಮ ಖ್ಯಾತಿಯ ದಿ. ಆರ್. ಎಸ್. ಹೂಗಾರ ದತ್ತಿ ಅಂಗವಾಗಿ ನೀಡುವ ಪ್ರತಿಷ್ಠಿತ ಆರ್. ಎಸ್. ಹೂಗಾರ ಸೇವಾರತ್ನ ಪ್ರಶಸ್ತಿ–೨೦೧೯ ಸ್ವೀಕರಿಸಿ ಮಾತನಾಡಿದ ಅವರು ಗ್ರಾಮೀಣ ಭಾಗದಲ್ಲಿ ಅಮೋಘ ಸೇವೆ ಸಲ್ಲಿಸುತ್ತಿರುವ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿಗೆ ನೀಡುತ್ತಿರುವ ಈ ಪ್ರಶಸ್ತಿಯು ಅಭಿನಂದನಾರ್ಹವಾಗಿದೆ.

ಬ್ಯಾಂಕ್ ಜನಸಾಮಾನ್ಯರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು, ಅವರ ಆರ್ಥಿಕ ಉನ್ನತಿಗಾಗಿ ೪೫ ವರ್ಷಗಳಿಂದ ಸಾರ್ಥಕ ಸೇವೆಗೈಯುತ್ತಿದೆ. ಡಿಜಿಟಲ್ ಬ್ಯಾಂಕಿಂಗ್ ಅಳವಡಿಸಿಕೊಂಡ ರಾಷ್ಟ್ರದ ಕೆಲವೇ ಕೆಲವು ಬ್ಯಾಂಕುಗಳಲ್ಲಿ ನಮ್ಮ ಬ್ಯಾಂಕ್ ಸಹ ಒಂದು. ಮಹಿಳಾ ಸಬಲೀಕರಣ ಹಾಗೂ ಆರ್ಥಿಕ ಸದೃಢತೆಗಾಗಿ ನಮ್ಮ ಬ್ಯಾಂಕ್ ವಿಕಾಸ್ ಶಿ ಪ್ಲಸ್ ವಿಕಾಸ್‌ಗ್ರಹ ಸ್ನೇಹಿ, ವಿಕಾಸ್ ಅನ್ನಪೂರ್ಣ ಎಂಬ ಪ್ರಗತಿಪರ ಯೋಜನೆ ಜಾರಿಗೆ ತಂದ ಮಹಿಳಾ ಸ್ನೇಹಿಯಾಗಿದೆ.

ಸತತ ಬರಗಾಲದಿಂದ ಜರ್ಜರಿತರಾದ ರೈತರ ಬಾಳಿಗೆ ಸಂಜೀವಿನಿಯಾದ ವಿಕಾಸ್ ಕೃಷಿ ಸಮೃದ್ಧ ಯೋಜನೆ ಜಾರಿಗೆ ತರಲಾಗಿದೆ. ಆಧುನಿಕ ತಂತ್ರಜ್ಞಾನಕ್ಕೆ ತಕ್ಕಂತೆ ಜಾಗತೀಕರಣದ ಈ ಸಂದರ್ಭದಲ್ಲಿ ಹೊಸ ಆಶಾಕಿರಣವಾದ ಮೊಬೈಲ್ ಬ್ಯಾಂಕಿಂಗ್, ಇ–ಕಾಮರ್ಸ್ ಯೋಜನೆ ಜಾರಿಗೆ ತರಲಾಗಿದೆ. ಕುಗ್ರಾಮಗಳಿಗೂ ಬ್ಯಾಂಕ್ ವ್ಯವಹಾರಕ್ಕಾಗಿ ವ್ಯವಹಾರ ಪ್ರತಿನಿಧಿ ನೇಮಕ ಮಾಡಲಾಗಿದೆ. ಭವಿಷ್ಯದ ಶಕ್ತಿಯಾದ ಸೌರಶಕ್ತಿ ಬಳಕೆಗೂ ನಮ್ಮ ಬ್ಯಾಂಕ್ ಶ್ರಮಿಸುತ್ತಿದೆ. ಬ್ಯಾಂಕ್ ಕೇವಲ ಲಾಭ ಗಳಿಕೆಯ ಉದ್ದೇಶ ಹೊಂದದೇ, ಸಮುದಾಯಿಕ ಕಾರ್ಯಕ್ರಮಗಳಾದ ಮಳೆಕೊಯ್ಲು, ಪರಿಸರ ಜಾಗೃತಿ, ಜಲ ಠೇವಣಿ ಯೋಜನೆ ನಮ್ಮ ಬ್ಯಾಂಕಿನ ವಿನೂತನ ಯೋಜನೆಗಳಾಗಿವೆ.

೯ ಜಿಲ್ಲೆಗಳ ಕಾರ್ಯಕ್ಷೇತ್ರ ಹೊಂದಿದ ಬ್ಯಾಂಕ್ ೬೩೬ ಶಾಖೆಗಳನ್ನು ೨೫ ಸಾವಿರ ಕೋಟಿ ವಹಿವಾಟ, ೧೪ ಸಾವಿರ ಕೋಟಿ ಠೇವಣಿ ಹೊಂದಿ, ೧೭೩೩ ಕೋಟಿ ನಿವ್ವಳ ಸಂಪತ್ತು ಹೊಂದಿದ್ದು ಒಂದು ದಾಖಲೆ ಎಂದು ಹೇಳಿ ಇದಕ್ಕೆಲ್ಲ ಗ್ರಾಹಕರು ನೀಡಿದ ಸಹಕಾರವನ್ನು ಸ್ಮರಿಸಿದರು.

ಸಂಘದ ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿ, ಬ್ಯಾಂಕಿಂಗ್ ಕ್ಷೇತ್ರದ ದಿಗ್ಗಜರಾದ ದಿ. ಆರ್. ಎಸ್. ಹೂಗಾರ ಎಲ್ಲರಂತೆ ಬದುಕಲಿಲ್ಲ, ಎಲ್ಲರಿಗಾಗಿ ಬದುಕಿದರು. ಅವರ ವ್ಯಕ್ತಿತ್ವದಲ್ಲಿ ಕತೃತ್ವ ಶಕ್ತಿ ಇತ್ತು. ಅವರ ಜೀವನ ಭವ್ಯವಾಗಿರದೇ ದಿವ್ಯವಾಗಿತ್ತು ಎಂದು ಹೇಳಿದರು.

ಅತಿಥಿಗಳಾಗಿ ಆಗಮಿಸಿದ ನಿವೃತ್ತ ಪ್ರಾಚಾರ್ಯ ಪ್ರೊ. ವ್ಹಿ.ವ್ಹಿ. ಹೆಬ್ಬಳ್ಳಿ ಮಾತನಾಡಿ, ಹೂಗಾರ ಅವರು ಸಾಮಾನ್ಯರಾಗಿ ಹುಟ್ಟಿ ಅಸಾಮಾನ್ಯರಾಗಿ ಬೆಳೆದು ಸಾಧನೆಗೈದರು. ಅವರ ಕಷ್ಟದ ಜೀವನವು ಅವರಲ್ಲಿ ಶಿಸ್ತು, ಪ್ರಾಮಾಣಿಕತೆ, ಕರ್ತವ್ಯ ಪ್ರಜ್ಞೆಗಳನ್ನು ಬೆಳೆಸಿತು. ಮಮತೆಯ ಮಾತೆಯನ್ನು ದೇವತೆಯಂತೆ ಕಂಡ ಅವರ ಹೃದಯವಂತರು ಎಂದರು.

ಅಧ್ಯಕ್ಷತೆ ವಹಿಸಿದ್ದ ಖ್ಯಾತ ಆರ್ಥಿಕ ತಜ್ಞ ಡಾ. ಎಸ್.ಎಸ್. ಹೂಗಾರ ಮಾತನಾಡಿ, ಹೂಗಾರವರಲ್ಲಿದ್ದ ಬದ್ಧತೆ, ಕಾರ್ಯ ತತ್ಪರತೆಗಳು ಅವರನ್ನು ಅಂತಾರಾಷ್ಟ್ರೀಯ ಖ್ಯಾತ ನಾಮರನ್ನಾಗಿಸಲು ಸಾಧ್ಯವಾಯಿತು. ತಾಯಿ ನೀಡಿದ ಒಳ್ಳೆ ಸಂಸ್ಕಾರದಿಂದ ಸುಸಂಸ್ಕೃತರಾಗಿ ಬೆಳೆದು ಸಾರ್ಥಕ ಜೀವನ ನಡೆಸಿದ ಪುಣ್ಯವಂತರು ಎಂದರು.

ದಿ. ಆರ್.ಎಸ್. ಹೂಗಾರ ಅವರ ಪುತ್ರಿ ನಮ್ರತಾ ಹೂಗಾರ ದತ್ತಿ ದಾನಿಗಳ ಪರವಾಗಿ ಮಾತನಾಡಿ ತಮ್ಮ ತಂದೆಯವರ ರಚನಾತ್ಮಕ ಕಾರ್ಯಕ್ರಮಗಳನ್ನು ಹೂಗಾರ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಮೂಲಕ ಮುಂದುವರೆಸುವುದಾಗಿ ಹೇಳಿದರು. ದಿ. ಆರ್.ಎಸ್. ಹೂಗಾರ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಇದೇ ಸಂದರ್ಭದಲ್ಲಿ ಅಗಲಿದ ಮಾನನ್ಯ ಕವಿಗಳಾದ ಬಿ.ಎ. ಸನದಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ(ಇಟಗಿ), ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ, ಕಾರ್ಯಕಾರಿ ಸಮಿತಿ ಸದಸ್ಯ ಸತೀಶ ತುರಮರಿ ಹಾಗೂ ಉಪನ್ಯಾಸಕ ವೀರಣ್ಣ ಒಡ್ಡೀನ, ಮಹಾಂತೇಶ ನರೇಗಲ್, ಕೆ.ಟಿ. ಭಟ್, ಎ.ಎನ್. ಮುದುಕನ್ನವರ, ಉಲ್ಲಾಸ ಗುಣಗಾ, ಜಿ.ಎಸ್. ಚಿಕ್ಕಮಠ, ಜಯಶ್ರೀ ಬೀಡೀಕರ, ಶ್ರೀದೇವಿ ತೇವರಿ, ಸೀಮಾ ಕಾಮತ್, ಎಚ್.ಎ. ಪಾಟೀಲ, ವಿ.ವಿ. ಪಾಟೀಲ, ಭೀಮಪ್ಪ ಜಾಧವ, ಮಹೇಶ ಕುಲಕರ್ಣಿ, ವಾಯ್.ಸಿ. ಬಿಜಾಪುರ, ಚನಬಸಪ್ಪ ಅವರಾಧಿ ಹಾಗೂ ಹೂಗಾರ ಅಭಿಮಾನಿಗಳು ಇದ್ದರು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಮನೋಜ ಪಾಟೀಲ ಪರಿಚಯಿಸಿದರು. ಶಾಂತೇಶ ಗಾಮನಗಟ್ಟಿ ವಂದಿಸಿದರು. ಪ್ರೊ. ಅಮೃತಾ ಮಡಿವಾಳರ ನಿರೂಪಿಸಿದರು.

**ಕೃಷ್ಣ ಜೋಶಿ**
ಕೋಶಾಧ್ಯಕ್ಷರು
ಮೊ : ೯೮೮೦೮–೬೧೩೨೦